# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ/ವಾರ್ಡ್ ಸಮಿತಿ ಸಹಾಯಕ ಅಭಿಯಂತರರ ಕಛೇರಿ ವಾರ್ಡ್ ಸಂಖ್ಯೆ: 138 ಛಲವಾದಿಪಾಳ್ಯ ಬೆಂಗಳೂರು

**************************************************************************************

ಸಂಖ್ಯೆ: W-138/Committee-06-02/2022-23 Dt: 21/06/2022

## ವಾರ್ಡ್ ಹಂತದ ಸಮಿತಿ ಸಭೆ

ವಾರ್ಡ್–138

ದಿನಾಂಕ: 21/06/2022 ರಂದು ಬೆಳಗ್ಗೆ 12.30 ಗಂಟೆಗೆ ವಾರ್ಡ್ ಸಂಖ್ಯೆ:138 ಛಲವಾದಿಪಾಳ್ಯ ವಾರ್ಡ್ ಹಂತದ ಸಮಿತಿ ಸಭೆಯನ್ನು ಶ್ರೀ. ಮೊಹಮ್ಮದ್ ಜಾಫರ್ ಸಾಧಿಕ್ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಂಟಿ ನಿರ್ದೇಶಕರು (ನಗರ ಯೋಜನೆ –ದಕ್ಷಿಣ) ಬಿಬಿಎಂಪಿ ಹಾಗೂ ಅಧ್ಯಕ್ಷರು ಮತ್ತು ವಾರ್ಡಿನ ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ: 138 ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು.

## <u>ಸಭೆಯಲ್ಲಿ ಚರ್ಚಿಸಲಾದ ವಿಷಯಗಳು</u>

ಮೊದಲಿಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಗಮನಹರಿಸುತ್ತಾ ಹಾಗೂ ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಹರಿಸಿದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಬೀದಿ ದೀಪದ ಬಗ್ಗೆ ದೂರು ಸಲ್ಲಿಕೆಯಾಗಿರುತ್ತದೆ. ಈ ಬಗ್ಗೆ ಕಿರಿಯ ಅಭಿಯಂತರರು (ವಿದ್ಯುತ್) ರವರಿಗೆ ವರದಿ ನೀಡುವಂತೆ ಕೋರಿ, ಕೂಡಲೇ ವಿದ್ಯುತ್ ದೀಪ ದುರಸ್ಥಿಗೊಳಿಸಲು ಸೂಚಿಸುವಂತೆ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಿದರು.

ಎ.ಬಿ.ಸಿ ಲೇನ್, ಅಂಜನಪ್ಪ ಗಾರ್ಡನ್ ನಲ್ಲಿ ಮೋರಿ ಹೂಳು ತುಂಬಿರುವುದರಿಂದ ಮಳೆನೀರು ರಸ್ತೆಯಲ್ಲಿ ಹರಿಯುವುದಾಗಿ ಶ್ರೀ.ಎ.ಜೆ.ರಾಜು ರವರು ಸಭೆಯಲ್ಲಿ ತಿಳಿಸಿದರು. ಮುಂದಿನ ಅನುದಾನದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ನೋಡಲ್ ಅಧಿಕಾರಿಯವರು ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಿದರು.

ವಾರ್ಡ್–138 ವ್ಯಾಪ್ತಿಯಲ್ಲಿ 5 ಜಾಗಗಳಲ್ಲಿ ವಾಲ್‌ಕ್ಲಾಕ್(ಟವರ್ ಕ್ಲಾಕ್) ಅಳವಡಿಸುವ ಸಂಬಂಧ ಮಾನ್ಯ ಶಾಸಕರಾದ ಶ್ರೀ. ಬಿ.ಜಡ್. ಜಮೀರ್ ಅಹಮದ್ ಖಾನ್ ರವರು ಮಾನ್ಯ ವಲಯ ಆಯುಕ್ತರಿಗೆ ದಿನಾಂಕ: 18/02/2022 ರಂದು ಪತ್ರ ಬರೆದಿರುತ್ತಾರೆ. ಈ ಬಗ್ಗೆ ದಿನಾಂಕ: 27/05/2022 ರಂದು ಜಂಟಿ ಆಯುಕ್ತರು (ಪಶ್ಚಿಮ) ರವರು ವಾಲ್‌ಕ್ಲಾಕ್ ಅಳಡಿಸುವುದರಿಂದ ಆಗುವ ಅನುಕೂಲ ಹಾಗೂ ಅನಾನುಕೂಲಗಳ ಬಗ್ಗೆ ವಿವರಣೆಯನ್ನು ಕೋರಿರುತ್ತಾರೆ.

ಈ ಬಗ್ಗೆ ಗಡಿಯಾರ ಅಳವಡಿಸುವುದರಿಂದ ಪಾದಚಾರಿಗಳಿಗೆ ಅನಾನುಕೂಲ ಉಂಟಾಗದಂತೆ ಗಮನಹರಿಸಿ ಅಳವಡಿಸಬಹುದಾಗಿ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಅಭಿಪ್ರಾಯ ತಿಳಿಸಿದರು.

ಪ್ರ.ತಿ.ನೋ

ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯ ಬಗ್ಗೆ ಹೆಚ್ಚಿನ ಗಮನ ಹರಿಸಲು ನೋಡಲ್ ಅಧಿಕಾರಿಗಳು ಕಾರ್ಯದರ್ಶಿಗಳಿಗೆ ತಿಳಿಸಿದರು.

ಇಂದಿನ ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು ಸಭೆಯ ನಡವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ ಮತ್ತು
ಕಿರಿಯ ಅಭಿಯಂತರರು

ಅಧ್ಯಕ್ಷರು &
ನೋಡಲ್ ಅಧಿಕಾರಿ